(4)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು–02

ಸಂ: ವಿಆ(ಯೋ)/ಪಿಆರ್/5790/16–17 ದಿನಾಂಕ:28–10–2016

7

ಕಛೇರಿ ಆದೇಶ

ವಿಷಯ: ಪಾಲಿಕೆಯ ವಿವಿಧ ವಲಯಗಳ ವ್ಯಾಪ್ತಿಯ ರಸ್ತೆಗುಂಡಿಗಳನ್ನು ತುರ್ತುಕಾಮಗಾರಿಗಳಡಿಯಲ್ಲಿ ಅರ್ಹ ಗುತ್ತಿಗೆದಾರರಿಗೆ 4(ಜಿ) ವಿನಾಯಿತಿಯಲ್ಲಿ ನೇರವಾಗಿ ವಹಿಸಿ ಮುಚ್ಚಿಸುವ ಪ್ರಕ್ರಿಯೆ

ಉಲ್ಲೇಖ: 1. ಸರ್ಕಾರದ ಅಪರಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯವರ ಪತ್ರ ಸಂಖ್ಯೆ ನಅಇ 602 ಎಂಎನ್‌ವೈ 2016 ದಿನಾಂಕ 03–10–2016
2. ವಿಶೇಷ ಆಯುಕ್ತರು(ಯೋಜನೆಗಳು)ರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ : ವಿಆ(ಯೋ)/ಪಿಆರ್/5790/16–17 ದಿನಾಂಕ 18–10–2016

(B)

14/11/16

ಬೆಂಗಳೂರು ನಗರದಲ್ಲಿ ಸುಮಾರು 13,000 ಕಿ.ಮೀ. ನಷ್ಟು ರಸ್ತೆಗಳು ಪಾಲಿಕೆಯ ವಿವಿಧ ವಲಯಗಳ ವ್ಯಾಪ್ತಿಯಲ್ಲಿ ಇದ್ದು ಸದರಿ ರಸ್ತೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಪಾಲಿಕೆಯ ಜವಾಬ್ದಾರಿಯಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಸದರಿ ರಸ್ತೆಗಳ ಕೆಲವು ಭಾಗಗಳಲ್ಲಿ ರಸ್ತೆಗುಂಡಿಗಳು ಮತ್ತು ಹಾಳಾದ ಮೇಲ್ಪೈಗಳ ಬಗ್ಗೆ ಕಟು ವಿಮರ್ಶೆಯನ್ನು ದೃಶ್ಯ ಮತ್ತು ಮುದ್ರಣ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಮಾಡಲಾಗುತ್ತಿದೆ. ಇದರಿಂದಾಗಿ ಸದರಿ ರಸ್ತೆ ಗುಂಡಿಗಳನ್ನು ತುರ್ತಾಗಿ ಮೇಲೆ ಮುಚ್ಚಿ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲವನ್ನು ಆದ್ಯತೆಯ ಮೇರೆಗೆ ದೂರ ಮಾಡುವ ಜವಾಬ್ದಾರಿ ಪಾಲಿಕೆಯ ಮೇಲಿದೆ.

3090

ಪಾಲಿಕೆಯ 2016–17ರ ಆಯವ್ಯಯದಲ್ಲಿ ಕೇಂದ್ರ ವಲಯಗಳ ಪ್ರತಿ ವಾರ್ಡ್‌ಗಳಿಗೂ ರೂ 2.0 ಕೋಟಿ ಮತ್ತು ನೂತನ ವಲಯಗಳಿಗೆ ರೂ. 3.0 ಕೋಟಿಯಂತೆ ವಾರ್ಡ್ ಮಟ್ಟದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಒದಗಿಸಲಾಗಿರುತ್ತದೆ. ಸದರಿ ಅನುದಾನದ 10 ಪ್ರತಿಶತ ಅನುದಾನವನ್ನು ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಅನುವಾಗುವಂತೆ ಕೆಟಿಪಿಪಿ ಕಾಯ್ದೆಯ 4(ಜಿ) ಪರಿಚ್ಛೇದಕ್ಕೆ ಅನುಗುಣವಾಗಿ ವಿನಾಯಿತಿಯನ್ನು ಪಾಲಿಕೆಯ ಕೋರಿಕೆಯ ಮೇರೆಗೆ ಕರ್ನಾಟಕ ಸರಕಾರವು ಉಲ್ಲೇಖಿತ ಆದೇಶದಂತೆ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿ ವಾರ್ಡಿಗೆ ಮೀಸಲಾಗಿರುವ ಅನುದಾನದ 10% ಅನುದಾನವನ್ನು ತುರ್ತುಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಗೆ ನೇರವಾಗಿ ವಹಿಸಬಹುದಾಗಿರುತ್ತದೆ. ಮತ್ತು ರಸ್ತೆಗುಂಡಿ ಮುಚ್ಚುವ ಕಾಮಗಾರಿಗಳಿಗೆ ಸದರಿ ತುರ್ತು ಕಾಮಗಾರಿಗಳಲ್ಲಿ ಆದ್ಯತೆ ನೀಡಲು ಸೂಚಿಸಲಾಗಿರುತ್ತದೆ.

14/11/2016

1364

ಈ ಹಿನ್ನೆಲೆಯಲ್ಲಿ ಪ್ರತಿ ವಾರ್ಡಿಗೆ ಮೀಸಲಾಗಿರುವ ಅನುದಾನದ 10% ಅನುದಾನವನ್ನು ರಸ್ತೆಗುಂಡಿ ಮುಚ್ಚುವ ಕಾಮಗಾರಿಗಳಿಗೆ ಪ್ರಥಮ ಆದ್ಯತೆಯೊಂದಿಗೆ ತುರ್ತುಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದೆ ಮತ್ತು ಅರ್ಹ ಗುತ್ತಿಗೆದಾರರಿಗೆ ನೇರವಾಗಿ ಗುತ್ತಿಗೆ ವಹಿಸಲು ಈ ಮೂಲಕ ಎಲ್ಲ ವಲಯಗಳ ಕಾರ್ಯಪಾಲಕ ಅಭಿಯಂತರರಿಗೆ ಅಧಿಕಾರ ನೀಡಲಾಗಿದೆ. ಅಲ್ಲದೇ ಸದರಿ ಪ್ರಕ್ರಿಯೆಯನ್ನು ಕೆಳಗೆ ಪಟ್ಟಿ ಮಾಡಿದ ನಿಬಂಧನೆಗಳಿಗೆ ಅನುಗುಣವಾಗಿ ಕಡ್ಡಾಯವಾಗಿ ನಿರ್ವಹಿಸಲು ವಲಯ ಕಾಮಗಾರಿ ಶಾಖೆಗಳ ಎಲ್ಲ ಅಭಿಯಂತರರಿಗೆ ಸೂಚಿಸಲಾಗಿದೆ.

AEE(YNR)
AEE(YNR)

23/11/16

1979
24/11/16

1. ಪ್ರತಿ ವಾರ್ಡಿನ ಎಲ್ಲ ರಸ್ತೆಗಳಲ್ಲಿ ಇರುವ ಎಲ್ಲ ರಸ್ತೆಗುಂಡಿಗಳನ್ನು ಪ್ರತಿ ರಸ್ತೆಗುಂಡಿಯ ನಿಖರ ನೆಲೆಯನ್ನು ವಿಳಾಸಸಹಿತ ನಮೂದಿಸುವ ಮೂಲಕ ಸ್ಥಳ ಪರಿಶೀಲನೆ ಮಾಡಿ ಪಟ್ಟಿಮಾಡತಕ್ಕದ್ದು. ಪಾಲಿಕೆಯ ರಸ್ತೆಗುಂಡಿ ಆ್ಯಪ್‌ನಲ್ಲಿ ಈ ಎಲ್ಲ ರಸ್ತೆಗುಂಡಿಗಳ Geotagged ಛಾಯಾಚಿತ್ರವನ್ನು ಅಪ್‌ಲೋಡ್ ಮಾಡತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಸಹಾಯಕ/ಕಿರಿಯ ಅಭಿಯಂತರರು, ಮೇಲುಸ್ತುವಾರಿ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು)

2. ಹೀಗೆ ತಯಾರಿಸಿದ ಎಲ್ಲ ಸದರಿ ರಸ್ತೆಗುಂಡಿಗಳ ಪಟ್ಟಿಯನ್ನು ದೋಷ ಬಾಧ್ಯತಾ ಅವಧಿಯಲ್ಲಿರುವ ರಸ್ತೆಗಳು, ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳು, ನಗರೋತ್ಥಾನ ಅನುದಾನದಲ್ಲಿ ಅಭಿವೃದ್ಧಿಪಡಿಸುತ್ತಿರುವ ರಸ್ತೆಗಳು, 14ನೇ ಹಣಕಾಸು ಆಯೋಗದ ಅನುದಾನದಲ್ಲಿ ಅಭಿವೃದ್ಧಿಪಡಿಸುತ್ತಿರುವ ರಸ್ತೆಗಳು, ಎಸ್.ಎಫ್.ಸಿ ಅನುದಾನ ಅಥವಾ ಇನ್ಯಾವುದೇ ಅನುದಾನದಲ್ಲಿ ಅಭಿವೃದ್ಧಿಪಡಿಸುತ್ತಿರುವ ರಸ್ತೆಗಳಲ್ಲಿರುವ ರಸ್ತೆಗುಂಡಿಗಳನ್ನು ಕೈಬಿಡತಕ್ಕದ್ದು ಮತ್ತು ಸದರಿ ರಸ್ತೆಗಳ ರಸ್ತೆಗುಂಡಿಗಳನ್ನು ಆಯಾ ರಸ್ತೆ ಕಾಮಗಾರಿಯ ಗುತ್ತಿಗೆದಾರರಿಂದಲೇ ಮುಚ್ಚಿಸತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಸಹಾಯಕ/ಕಿರಿಯ ಅಭಿಯಂತರರು, ಮೇಲುಸ್ತುವಾರಿ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು)

3. ಗುಂಡಿ ಮುಚ್ಚುವ ಪೂರ್ವದ ಮತ್ತು ನಂತರದ ಛಾಯಾಚಿತ್ರಗಳನ್ನು ಗುಂಡಿಯ ಸ್ಥಳ, ರಸ್ತೆ ಮತ್ತು ಗುಂಡಿಮುಚ್ಚಿದ ದಿನದ ವಿವರಗಳೊಂದಿಗೆ ಪಾಲಿಕೆಯ ಜಾಲತಾಣದಲ್ಲಿ ವಾರ್ಡ್‌ವಾರು ಪ್ರಕಟಿಸತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಕಾರ: ಐಟಿ ಶಾಖೆ)

4. ಉಳಿದಂತೆ ಇತರ ರಸ್ತೆಗಳಲ್ಲಿರುವ ರಸ್ತೆಗುಂಡಿಗಳನ್ನು ತುರ್ತಾಗಿ 4(ಜಿ) ವಿನಾಯಿತಿಯಲ್ಲಿ ಮುಚ್ಚಿಸಲು ಅಂದಾಜು ಪಟ್ಟಿಯನ್ನು ತಯಾರಿಸತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಸಹಾಯಕ/ಕಿರಿಯ ಅಭಿಯಂತರರು, ಮೇಲುಸ್ತುವಾರಿ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು)

5. ಪ್ರತ್ಯಾಯೋಜಿತ ಅಧಿಕಾರದಂತೆ ಆಡಳಿತಾತ್ಮಕ ಅನುಮೋದನೆ ಟಿಪ್ಪಣಿ ಮತ್ತು ತಾಂತ್ರಿಕ ಮಂಜೂರಾತಿ ನೀಡತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಕಾರ್ಯಪಾಲಕ ಅಭಿಯಂತರರು/ಮುಖ್ಯ ಅಭಿಯಂತರರು/ಜಂಟಿ ಆಯುಕ್ತರು)

6. ಗುಂಡಿಮುಚ್ಚುವ ಅಥವಾ ಇತರ ಯಾವುದೇ ಕಾಮಗಾರಿಗಳನ್ನು ವಹಿಸುವಾಗ ಅಗತ್ಯ ಸಲಕರಣೆ, ಯಂತ್ರಗಳು ಮತ್ತು ವಾಹನಗಳನ್ನು ಹೊಂದಿರುವ ಮತ್ತು ಈ ಹಿಂದೆ ಇಂತಹ ಕಾಮಗಾರಿಗಳನ್ನು ನಿರ್ವಹಿಸಿ ನೈಪುಣ್ಯತೆ ಪಡೆದಿರುವ ಹಾಗೂ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಆರ್ಥಿಕ ಅರ್ಹತೆ ಮತ್ತು ಇತರ ಷರತ್ತುಗಳಿಗೆ ಅರ್ಹತೆಗಳನ್ನು ಹೊಂದಿರುವ ಗುತ್ತಿಗೆದಾರರಿಗೆ ಮಾತ್ರ ಸಮಂಜಸ ದರದಲ್ಲಿ ವಹಿಸಲು ಸೂಚಿಸಿದೆ. ಸದರಿ ಗುತ್ತಿಗೆದಾರರಿಗೆ ನೀಡಿರುವ ಕಾರ್ಯಾದೇಶಗಳ ಪ್ರತಿಯನ್ನು, ಮುಚ್ಚಬೇಕಾದ ರಸ್ತೆಗುಂಡಿಗಳ ನಿಖರವಾದ ವಿವರದೊಂದಿಗೆ ಮತ್ತು ತಾಂತ್ರಿಕ ಮಂಜೂರಾತಿ ನೀಡಿರುವ ಅಂದಾಜುಪಟ್ಟಿಯೊಂದಿಗೆ ಪಾಲಿಕೆಯ ಜಾಲತಾಣದಲ್ಲಿ ವಾರ್ಡ್‌ವಾರು ಪ್ರಕಟಿಸತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಕಾರ್ಯಪಾಲಕ ಅಭಿಯಂತರರು ಸಹಕಾರ: ಬಿಬಿಎಂಪಿ ಶಾಖೆ)

7. ಸದರಿ ಕಾಮಗಾರಿಗಳನ್ನು ಯಾವುದೇ ಸಂದರ್ಭದಲ್ಲಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸತಕ್ಕದ್ದಲ್ಲ ಮತ್ತು ಅಂತಹ ಪ್ರಸ್ತಾವನೆಗಳನ್ನು ಸಹ ಮೇಲಧಿಕಾರಿಗಳಿಗೆ ಸಲ್ಲಿಸತಕ್ಕದ್ದಲ್ಲ.

(ಹೊಣೆಗಾರಿಕೆ: ವಲಯಗಳ ಕಾರ್ಯಪಾಲಕ ಅಭಿಯಂತರರು ಮೇಲುಸ್ತುವಾರಿ: ವಲಯ ಮುಖ್ಯ ಅಭಿಯಂತರರು)

8. ರಸ್ತೆಗುಂಡಿಗಳನ್ನು IRC-82 ಮತ್ತು MOST ವಿಶೇಷ ವಿವರಣೆಯಂತೆ ಮುಚ್ಚಿಸತಕ್ಕದ್ದು. ಮತ್ತು ಗುಣಮಟ್ಟ ಪರೀಕ್ಷೆಗಳನ್ನು ತಪ್ಪದೇ ಮಾಡತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಸಹಾಯಕ/ಕಿರಿಯ ಅಭಿಯಂತರರು, ಮೇಲುಸ್ತುವಾರಿ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು)

9. ಅಂದಾಜು ಪಟ್ಟಿ ತಯಾರಿಸುವಾಗ ಪ್ರಸ್ತುತ ರಸ್ತೆಗಳಲ್ಲಿ ಅಸ್ತಿತ್ವದಲ್ಲಿರುವ ಮತ್ತು ಇತರ ಯಾವುದೇ ಮೂಲಗಳಿಂದ (ನಗರೋತ್ಥಾನ, ಎಸ್.ಎಫ್.ಸಿ. ದೋಷ ಬಾಧ್ಯತಾ ಅವಧಿ (DLP) ಇತ್ಯಾದಿ) ಮುಚ್ಚಲು ಸಾಧ್ಯವಿಲ್ಲದ ರಸ್ತೆಗುಂಡಿಗಳನ್ನು ಮುಚ್ಚಲು ಮಾತ್ರ ಸೀಮಿತವಾಗಿ ಅಂದಾಜುಪಟ್ಟಿ ತಯಾರಿಸತಕ್ಕದ್ದು.

ಭವಿಷ್ಯದಲ್ಲಿ ಯಾವುದೇ ರಸ್ತೆಗುಂಡಿ ನಿರ್ಮಾಣವಾಗುವುದನ್ನು ನಿರೀಕ್ಷಿಸಿ ಅಂದಾಜುಪಟ್ಟಿಯಲ್ಲಿ ಸೇರಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.

(ಹೊಣೆಗಾರಿಕೆ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು ಮೇಲುಸ್ತುವಾರಿ: ವಲಯ ಮುಖ್ಯ ಅಭಿಯಂತರರು)

10. ಈ ಎಲ್ಲ ರಸ್ತೆಗುಂಡಿಗಳನ್ನು ದಿನಾಂಕ: 09-11-2016ರ ಒಳಗೆ ಉತ್ತಮ ಗುಣಮಟ್ಟದ ಕಾಮಗಾರಿ ನಿರ್ವಹಿಸಿ ಮುಚ್ಚಲು ಕ್ರಮ ವಹಿಸುವುದು.

(ಹೊಣೆಗಾರಿಕೆ: ವಲಯಗಳ ಸಹಾಯಕ/ಕಿರಿಯ ಅಭಿಯಂತರರು, ಮೇಲುಸ್ತುವಾರಿ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು)

11. ಸಂಬಂಧಪಟ್ಟ ವಲಯ ಮುಖ್ಯ ಅಭಿಯಂತರರು ಸದರಿ ಪ್ರಕ್ರಿಯೆಯ ಮೇಲುಸ್ತುವಾರಿ ವಹಿಸಿ ಆಯಾ ವಲಯ ವ್ಯಾಪ್ತಿಗೆ ಒಳಪಡುವ ಎಲ್ಲ ರಸ್ತೆಗಳ ರಸ್ತೆಗುಂಡಿಗಳನ್ನು (ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳನ್ನು ಮಾತ್ರ ಹೊರತುಪಡಿಸಿ) ನಿರ್ದಿಷ್ಟ ಅವಧಿಯೊಳಗೆ ಮುಚ್ಚಿಸುವ ಜವಾಬ್ದಾರಿ ಮತ್ತು ಈ ಬಗ್ಗೆ ಪ್ರತಿ ಎರಡು ದಿನಕ್ಕೊಮ್ಮೆ ಪ್ರಧಾನ ಅಭಿಯಂತರರಿಗೆ ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ವಾರ್ಡ್‌ವಾರು ವರದಿ ಒಪ್ಪಿಸುವಂತೆ ಸೂಚಿಸಿದೆ.

12. ಈ ಪ್ರಕ್ರಿಯೆಯಲ್ಲಿ ವಲಯ ವ್ಯಾಪ್ತಿಯ ಕಛೇರಿಗಳಿಗೆ ಮೇಲಿನಂತೆ ಕರ್ತವ್ಯ ನಿರ್ವಹಿಸಲು ಅಗತ್ಯ ಸಹಕಾರವನ್ನು ಒದಗಿಸಲು ಪಾಲಿಕೆಯ ಐಟಿ ಶಾಖೆಗೆ ಸೂಚಿಸಿದೆ.

13. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಪ್ರತಿ ಉಪವಿಭಾಗಕ್ಕೆ ಸೀಮಿತವಾಗಿ ಕಾಮಗಾರಿ ಸಂಖ್ಯೆ ಪ್ರಮಾಣಪತ್ರ ನೀಡಲು ಆರ್ಥಿಕ ಶಾಖೆಗೆ ಸೂಚಿಸಿದೆ. ಇದಕ್ಕಾಗಿ ವಿಭಾಗವಾರು ಪ್ರಸ್ತಾವನೆಗಳನ್ನು ಕ್ರೋಢೀಕರಿಸಿ ದಿನಾಂಕ 03-11-2016ರ ಒಳಗೆ ಸಂಬಂಧಪಟ್ಟ ವಲಯ ಮುಖ್ಯ ಅಭಿಯಂತರರು ವಿಶೇಷ ಆಯುಕ್ತರು(ಯೋಜನೆಗಳು)ರವರಿಗೆ ಸಲ್ಲಿಸತಕ್ಕದ್ದು. ಹೀಗೆ ಸಲ್ಲಿಸಲ್ಪಟ್ಟ ಪ್ರಸ್ತಾವನೆಗಳ ಕಾಮಗಾರಿ ಸಂಖ್ಯೆ ಪ್ರಮಾಣಪತ್ರಗಳನ್ನು ವಲಯವಾರು ಕ್ರೋಢೀಕರಿಸಿ ಒಂದೇ ಬಾರಿಗೆ ಸಂಬಂಧಪಟ್ಟ ಮುಖ್ಯ ಅಭಿಯಂತರರ ಕಛೇರಿಗೆ ಕಳುಹಿಸಲು ವಿಶೇಷ ಆಯುಕ್ತರು (ಹಣಕಾಸು)ರವರಿಗೆ ಸೂಚಿಸಿದೆ.

14. ಕಾಮಗಾರಿಗಳು ಪೂರ್ಣಗೊಂಡ ನಂತರ ಬಿಲ್ ಪಾವತಿಯಲ್ಲಿ ಆದ್ಯತೆಯನ್ನು ನೀಡತಕ್ಕದ್ದು. ಮತ್ತು ಬಿಲ್ ಪಾವತಿ ಮಾಡುವ ಸಂದರ್ಭಗಳಲ್ಲಿ ಈ ಕಛೇರಿ ಆದೇಶ ಸಂಖ್ಯೆ ಪ್ರ.ಅ./ಪಿಆರ್/339/16-17 ದಿನಾಂಕ 04-08-2016ನ್ನು ಕಡ್ಡಾಯವಾಗಿ ಪಾಲಿಸುವುದು.

ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೆ ಸುಗಮ ವಾಹನ ಸಂಚಾರಕ್ಕೆ ಅನುವಾಗುವಂತೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಸದರಿ ಕಾಮಗಳನ್ನು ನಿಯಮಿತ ಮತ್ತು ಕ್ಷಿಪ್ರವಾಗಿ ನಿರ್ವಹಿಸಿ ಮಾಧ್ಯಮಗಳಲ್ಲಿ ಪಾಲಿಕೆಯ ವಿರುದ್ಧ ಪ್ರತಿಕೂಲ ವರದಿಗಳು ವರದಿಯಾಗದಂತೆ ಕ್ರಮವಹಿಸಲು ಸೂಚಿಸಿದೆ. ಅಲ್ಲದೇ ಈ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಎಲ್ಲ ವಿವರಗಳನ್ನು ಪಾಲಿಕೆಯ ಜಾಲತಾಣಕ್ಕೆ ಅಪ್‌ಲೋಡ್ ಮಾಡಬೇಕಿರುತ್ತದೆ.

ಅನುಷ್ಠಾನ ಮತ್ತು ಮೇಲುಸ್ತುವಾರಿ ಜವಾಬ್ದಾರಿ ಹೊಂದಿರುವ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ ತೋರಿರುವುದು ಅಥವಾ ಆದೇಶವನ್ನು ಉಪೇಕ್ಷಿಸಿರುವುದು ಅಥವಾ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಗಳು

1. ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರಯೋಜನೆ ಸಚಿವರ ಅವಗಾಹನೆಗೆ ತರಲು ಮಾನ್ಯ ಸಚಿವರ ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಪೂಜ್ಯ ಮಹಾಪೌರರ ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಮಾನ್ಯ ಉಪ ಮಹಾಪೌರರ ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆರವರಿಗೆ ಸಲ್ಲಿಸಿದೆ.
5. ವಿಶೇಷ ಆಯುಕ್ತರು(ಯೋಜನೆಗಳು), ಬೃಬೆಂಮಪಾ - ಸೂಕ್ತ ಕ್ರಮಕ್ಕಾಗಿ
6. ವಿಶೇಷ ಆಯುಕ್ತರು (ಹಣಕಾಸು), ಬೃಬೆಂಮಪಾ - ಸೂಕ್ತ ಕ್ರಮಕ್ಕಾಗಿ
7. ಎಲ್ಲ ವಲಯಗಳ ಜಂಟಿ ಆಯುಕ್ತರು/ಮುಖ್ಯ ಅಭಿಯಂತರರು - ಸೂಕ್ತ ಕ್ರಮಕ್ಕಾಗಿ - Yelahanka
8. ಪ್ರಧಾನ ಅಭಿಯಂತರರು, ಬೃಬೆಂಮಪಾ - ಸೂಕ್ತ ಕ್ರಮಕ್ಕಾಗಿ
9. ಐಟಿ ಸಲಹೆಗಾರರು, ಬೃಬೆಂಮಪಾ ಸೂಕ್ತ ಕ್ರಮಕ್ಕಾಗಿ ಮತ್ತು ಪಾಲಿಕೆ ಜಾಲತಾಣದಲ್ಲಿ ಈ ಆದೇಶವನ್ನು ಪ್ರಚುರ ಪಡಿಸುವುದಕ್ಕಾಗಿ
10. ಕಛೇರಿ ಕಡತಕ್ಕೆ